ಚಲನಚಿತ್ರಗಳಿಗೆ ಸಬ್ಸಿಡಿ ನೀಡುವ ಬಗ್ಗೆ

೪೭೭೮. ಶ್ರೀ ಮಾಲಿಕಯ್ಯ ವಿ. ಗುತ್ತೇದಾರ್ (ಅಫಜಲ್‌ಪುರ).—ಮಾನ್ಯ ವಾರ್ತಾ ಪ್ರವಾಸೋದ್ಯಮ ಹಾಗೂ ಸಂಸ್ಕೃತಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯ ಸರ್ಕಾರದವರು ಎಲ್ಲಾ ಚಿತ್ರಗಳಿಗೂ ನೀಡಿದಂತೆ ಸಬ್ಸಿಡಿ ಸೌಲಭ್ಯವನ್ನು ರಾಜ್ಯದಲ್ಲಿ ತಯಾರಾಗುವ ಸಿನಿಮಾ ಸ್ಕೋಪ್ ೭೦ ಎಂ.ಎಂ. ಚಿತ್ರಗಳಿಗೂ ನೀಡಲಾಗುತ್ತಿದೆಯೇ ?

ಆ) I) ಸಿನಿಮಾ ಸ್ಕೋಪ್ ಮತ್ತು ೭೦ ಎಂ.ಎಂ. ಚಿತ್ರಗಳನ್ನು ತಯಾರಿಸಿ ನಂತರ ಅದಕ್ಕೆ ಬೇಕಾಗುವ ಉಪಕರಣಗಳಿಲ್ಲದಿರುವುದರಿಂದ ಸಂಸ್ಕರಣ ಕಲಸಕ್ಕೆ ಬೇರೆ ರಾಜ್ಯಗಳಿಗೆ ಹೋಗಿ ಅಲ್ಲಿ ಮುಗಿಸಿದ ಸಿನಿಮಾಗಳಿಗೆ ಸಬ್ಸಿಡಿ ತೆರಿಗೆ ವಿನಾಯಿತಿ ನೀಡಬಹುದಲ್ಲವೇ ?

II) ಈ ರೀತಿ ತಯಾರಿಸಲು ಸರಿಯಾಗಿ ಸ್ಟುಡಿಯೋ ಸೌಲಭ್ಯಗಳಿರುವುದಿಲ್ಲ ಎಂಬುದು ನಿಜವೇ ?

ಇ) ನಗರದಲ್ಲಿರುವ ಕಂಠೀರವ ಸ್ಟುಡಿಯೋವನ್ನು ಸರ್ಕಾರದವರು ನಡೆಸುತ್ತಿದ್ದಾರೆಯೇ ? ಅದರಲ್ಲಿ ಸರಿಯಾದ ಸೌಲಭ್ಯಗಳಿಲ್ಲದಿರುವುದು ತಿಳಿದಿದೆಯೇ ? ಇಲ್ಲಿ ಗಾರ್ಡನ್ ಸರಿಯಾಗಿ ಇಲ್ಲ. ಸ್ಥಳಾವಕಾಶ ಅವಶ್ಯಕತೆ ಇದೆ. ಆದ್ದರಿಂದ ಇನ್ನೂ ಒಂದೆರಡು ಫ್ಲೋರ್‌ಗಳನ್ನು ನಿರ್ಮಿಸಬಹುದಲ್ಲವೇ, ಅಸ್ತವ್ಯಸ್ತವಾಗಿರುವ ಸಂಕಲನ ವಿಭಾಗಕ್ಕಾಗಲೀ ಲ್ಯಾಬ್ ಮುಂತಾದವುಗಳನ್ನು ಹೊಸದಾಗಿ ಹಾಕಿದಲ್ಲಿ ಇನ್ನೂ ಉತ್ತಮ ಪಡಿಸಬಹುದಲ್ಲವೆ. ಹಾಗಿದ್ದಲ್ಲಿ ಇದರಿಂದ ನಮ್ಮ ರಾಜ್ಯದ ಚಲನಚಿತ್ರ ಬೆಳವಣಿಗೆಗೆ ಅಡಚಣೆಯಾಗಿಲ್ಲವೆ ?

ಈ) ಕರ್ನಾಟಕ ಸರ್ಕಾರಕ್ಕೆ ೧೯೮೬-೮೭, ೮೭-೮೮ರಲ್ಲಿ ಚಲನಚಿತ್ರ ಕ್ಷೇತ್ರದಿಂದ ಬಂದ ಲಾಭ ವೆಷ್ಟು ?

ಶ್ರೀ ಎಂ.ಪಿ. ಪ್ರಕಾಶ್ (ವಾರ್ತಾ, ಪ್ರವಾಸೋದ್ಯಮ ಮತ್ತು ಸಂಸ್ಕೃತಿ ಸಚಿವರು),—

ಅ) ಹೌದು.

ಆ) I) ಪರಿಶೀಲಿಸಲಾಗುವುದು.

II) ನಿಜವಲ್ಲ.

ಇ) ಸಾಕಷ್ಟು ಸ್ಥಳಾವಕಾಶವಿದ್ದು ಇಲ್ಲಿರುವ ಗಾರ್ಡನ್ ಚೆನ್ನಾಗಿದೆ. ಇತರೆಲ್ಲಾ ಸೌಲಭ್ಯಗಳಿವೆ. ಆದರೂ ಸೌಲಭ್ಯಗಳನ್ನು ಹೆಚ್ಚಿಸಲು ಕ್ರಮ ಕೈಗೊಳ್ಳಲಾಗುವುದು.

ಈ) ಲಾಭದ ಪ್ರಶ್ನೆ ಇಲ್ಲ. ಆದರೂ ರಾಜ್ಯಕ್ಕೆ ಚಲನಚಿತ್ರ ಕ್ಷೇತ್ರದಿಂದ ಮನರಂಜನಾ ತೆರಿಗೆ ರೂಪದಲ್ಲಿ ೧೯೮೬-೮೭ರಲ್ಲಿ ೩೩.೨೫ ಕೋಟಿ ರೂಪಾಯಿ, ೧೯೮೭-೮೮ರಲ್ಲಿ ೩೭.೭೦ ಕೋಟಿ ರೂ. ಗಳು ಬಂದಿದೆ.

ಶ್ರೀ ಮಾಲೀಕಯ್ಯ ವಿ. ಗುತ್ತೇದಾರ್.—ಮಾನ್ಯ ಅಧ್ಯಕ್ಷರೇ, 'ಅ' ಪ್ರಶ್ನೆಗೆ ಮಾನ್ಯ ಸಚಿವರು ಹೌದು ಎಂದು ಉತ್ತರ ಕೊಟ್ಟಿದ್ದಾರೆ. ೭೦ ಎಂ.ಎಂ. ಚಿತ್ರಗಳಿಗೆ ಕೇವಲ ಸಬ್ಸಿಡಿ ಕೊಡುತ್ತಿದ್ದಾರೆ. ಟ್ಯಾಕ್ಸ್ ಫ್ರೀ ಕೊಡುತ್ತಿಲ್ಲ. ೭೦ ಎಂ.ಎಂ. ಚಿತ್ರಗಳನ್ನು ಸಂಸ್ಕರಣ ಮಾಡಬೇಕಾದರೆ ಬೇರೆ ರಾಜ್ಯಗಳಿಗೆ ಹೋಗಬೇಕಾಗುತ್ತದೆ. ಅದೂ ಅಲ್ಲದೆ ಸರಿಯಾದ ಸೌಲಭ್ಯ ಕೂಡ ನಮ್ಮ ರಾಜ್ಯದಲ್ಲಿ ಇಲ್ಲ. ೭೦ ಎಂ.ಎಂ. ಕನ್ನಡ ಚಲನಚಿತ್ರಗಳಿಗೆ ಸಬ್ಸಿಡಿ ಕೊಡದೇ ಹೋದರೆ ಚಲನಚಿತ್ರ ಉದ್ದಿಮೆಗೆ ಬಹಳ ಹಾನಿಯಾಗುತ್ತದೆ. ಆದ್ದರಿಂದ ಇದರ ಬಗ್ಗೆ ಮಾನ್ಯ ಮಂತ್ರಿಯವರು ಸರಿಯಾದ ಉತ್ತರವನ್ನು ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್ —ಸನ್ಮಾನ್ಯ ಉಪಾಧ್ಯಕ್ಷರೇ, ಈಗಾಗಲೇ ಕನ್ನಡ, ಕೊಡವ, ಕೊಂಕಣಿ ತುಳು ಚಲನಚಿತ್ರಗಳಿಗೆ ಶೇ. ೫೦ರಷ್ಟು ರಿಯಾಯಿತಿಯನ್ನು ಕೊಡಲಾಗಿದೆ. ಆಮೇಲೆ ತಾಲ್ಲೂಕು ಮಟ್ಟದಲ್ಲಿ ಜನಸಂಖ್ಯಾ ಪ್ರಮಾಣದ ಮೇಲೆ ಶುಲ್ಕವನ್ನು ಕಡಿಮೆ ಮಾಡಿದ್ದೇವೆ. ಕನ್ನಡ, ಕೊಡವ, ಕೊಂಕಣಿ, ತುಳು ಈ ಚಲನ ಚಿತ್ರಗಳಿಗೆ ೧೯೮೬-೮೭ರಲ್ಲಿ ೧೦ ಕೋಟಿ ರೂಪಾಯಿಗಳು, ೧೯೮೭-೮೮

ರಲ್ಲಿ ೧೨.೩ ಕೋಟಿ ರೂಪಾಯಿಗಳು, ೧೯೮೮-೮೯ರಲ್ಲಿ ೧೩.೫೦ ಕೋಟಿ ರೂಪಾಯಿಗಳನ್ನು ಸಬ್ಸಿಡಿ ಹಣ ಕೊಡತಕ್ಕ ವ್ಯವಸ್ಥೆ ಮಾಡಿದ್ದೇವೆ.

ಕಲಾತ್ಮಕವಾದಂಥ ಚಿತ್ರಗಳಿಗೆ ಮೂರು ಲಕ್ಷ ರೂಪಾಯಿಗಳಷ್ಟು ಹಾಗೂ ಎರಡೂವರೆ ಲಕ್ಷ ರೂಪಾಯಿಗಳಷ್ಟು ಉಳಿದಿರತಕ್ಕಂಥ ಎಲ್ಲಾ ಚಿತ್ರಗಳಿಗೆ ಕೊಡತಕ್ಕಂಥ ರಿಯಾಯಿತಿ ಅಲ್ಲದೆ, ಅದರ ಜೊತೆಗೆ ಎಲ್ಲೆಲ್ಲಿ ೭೦ ಎಂ.ಎಂ. ಸಿನಿಮಾ ತಯಾರು ಮಾಡುವುದಕ್ಕಾಗಿ ನಮಗೆ ಇಲ್ಲಿ ಸೌಲಭ್ಯಗಳು ಇಲ್ಲ ಎ ದು ನಮಗೆ ಪತ್ರಗಳನ್ನು ಬರೆಯುತ್ತಾರೆ, ಆ ಪತ್ರಗಳ ಆಧಾರ ಮೇಲೆ ವಿಚಾರಣೆಯನ್ನು ಮಾಡಿ ಅವರಿಗೆ ನಾವು ಪರವಾನಿಗೆಯನ್ನು ಕೊಡುತ್ತೇವೆ. ನಮ್ಮ ರಾಜ್ಯದಲ್ಲಿ ಎಂಥ ಯಾವ ಸೌಲಭ್ಯಗಳು ಇಲ್ಲದಿರತಕ್ಕಂಥ ಸಂದರ್ಭಗಳಲ್ಲಿ ಸರಕಾರದ ಒಪ್ಪಿಗೆಯನ್ನು ಪಡೆದು ಚಲನಚಿತ್ರಗಳನ್ನು ತಯಾರು ಮಾತಬಹುದು, ೭೦ ಎಂ.ಎಂ. ಸಿನಿಮಾಗಳಲ್ಲಿ ಟ್ರೈಕ್ ಸೌಂಡ್ ರೆಕಾರ್ಡಿಂಗ್ ಇಲ್ಲಿ ಮಾಡುವಂಥ ಸೌಲಭ್ಯಗಳು ಇಲ್ಲದಿರುವುದರಿಂದ, ನಿರ್ಮಾಪಕರಾದ ರಾಜೇಂದ್ರಸಿಂಗ್ ರವರಿಗೆ ಒಂದು ಚಿತ್ರಕ್ಕೆ ಮತ್ತು ''ಶಬ್ದವೇಧದ ಸರದಾರ'' ಎಂಬ ಚಲನಚಿತ್ರಕ್ಕೆ ನಾವು ಪರವಾನಿಗೆಯನ್ನು ಬೇರೆ ರಾಜ್ಯಗಳಲ್ಲಿ ತಯಾರು ಮಾಡಲು ಕೊಟ್ಟಿದ್ದೇವೆ ಅದೇ ರೀತಿಯಲ್ಲಿ ಬೇರೆ ನಿರ್ಮಾಪಕರು ಮನವಿಯನ್ನು ಕೊಟ್ಟರೂ ಕೂಡ ಅದರ ಬಗ್ಗೆ ಪರಿಶೀಲನೆ ಮಾಡುತ್ತೇವೆ.

ಶ್ರೀ ಮಾಲೀಕಯ್ಯ ವಿ. ಗುತ್ತೇದಾರ್.—ಈ ಒಂದು ಉದ್ಯಮದಿಂದ ೩.೨೫ ಕೋಟಿ ರೂಪಾಯಿಗಳಷ್ಟು ಲಾಭ ಬರುತ್ತಿರುವಾಗ ಹೆಚ್ಚಿನ ಸೌಲಭ್ಯಗಳು ಇರದ ಕಂಠೀರವ ಸ್ಟುಡಿಯೋವನ್ನು ಅಭಿವೃದ್ಧಿ ಪಡಿಸ ಬಹುದಲ್ಲ ?

ಶ್ರೀ ಎಂ.ಪಿ. ಪ್ರಕಾಶ್.—ಇಲ್ಲಿ ಲಾಭ-ನಷ್ಟದ ಪ್ರಶ್ನೆ ಬರುವುದಿಲ್ಲ, ತೆರಿಗೆಯ ಪ್ರಶ್ನೆ ಇದೆ. ಮನೋರಂಜನ ತೆರಿಗೆಯ ರೂಪದಲ್ಲಿ ಸರಕಾರಕ್ಕೆ ೩೭.೭೦ ಕೋಟಿ ರೂಪಾಯಿಗಳು ಬರುತ್ತದೆ, ಕಂಠೀರವ ಸ್ಟುಡಿಯೋಗೆ ಸಂಬಂಧಪಟ್ಟಂತೆ ಸುಮಾರು ಜಾಗ ಇದೆ. ಈಗ ಅದರಲ್ಲಿ ಸಾಮಾನ್ಯವಾಗಿ ಎಲ್ಲಾ ಸೌಲಭ್ಯಗಳೂ ಇವೆ, ಎಲ್ಲಿ ಫ್ಲೋರ್ ಫ್ಲೋರನ್ನು ತಯಾರು ಮಾಡಿದ್ದೇವೆ. ನಾಗರ ಇದೆ, ಸೌಂಡ್ ರೆಕಾರ್ಡಿಂಗ್ ಇದೆ,ಪ್ರಸಾದ್ ಲಾಬೋರೇಟರಿಯವರಿಗೆ ಕೂಡ ಅಲ್ಲಿ ಕಲರ್ ಪ್ರೊಸೆಸಿಂಗ್ ಯೂನಿಟ್ ಹಾಕಿ ಕೊಳ್ಳತಕ್ಕ ವಿಚಾರದ ಬಗ್ಗೆ ಚರ್ಚೆಯಾಗುತ್ತಾ ಇದೆ. ಇನ್ನೂ ಏನೇನು ಸೌಲಭ್ಯಗಳನ್ನು ಆ ಉದ್ಯಮಕ್ಕೆ ಮಾಡಿಕೊಡ ಬೇಕೋ ಅದನ್ನು ಮಾಡುವುದಕ್ಕೆ ತಯಾರಾಗಿದ್ದೇವೆ.

ಶ್ರೀ ಕೆ.ಬಿ. ಶಾಣಪ್ಪ.—ಅಧ್ಯಕ್ಷರೇ, ಈ, ಶರವೇಗದ ಸರದಾರ ಚಿತ್ರವನ್ನು ಯಾರು ತೆಗೆಯುತ್ತಿದ್ದಾರೆ ಗೊತ್ತಿದೆಯೇ ?

ಶ್ರೀ ಎಂ.ಪಿ. ಪ್ರಕಾಶ್.—ಅದರ ಬಗ್ಗೆ ನನ್ನಲ್ಲಿ ಮಾಹಿತಿ ಇಲ್ಲ.

ಮ್ಯಾಂಚೆಸ್ಟರ್‌ನಲ್ಲಿ ನಡೆದ ವಿಶ್ವ ಕನ್ನಡ ಸಮ್ಮೇಳನಕ್ಕಾಗಿ ರಾಜ್ಯ ಸರಕಾರ ಮಾಡಿದ ಹಣದ ಬಗ್ಗೆ

೨೯೪೫. ಶ್ರೀ ಬಿ. ಲಕ್ಕಪ್ಪ (ಚಿಕ್ಕನಾಯಕನ ಹಳ್ಳಿ).— ಮಾನ್ಯ ವಾರ್ತಾ ಪ್ರವಾಸೋದ್ಯಮ ಹಾಗೂ ಸಂಸ್ಕೃತಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಮ್ಯಾಂಚೆಸ್ಟರ್‌ನಲ್ಲಿ ಆಗಸ್ಟ್ ೨೬ನೇ ತಾರೀಖಿನಿಂದ ನಡೆದ ವಿಶ್ವ ಕನ್ನಡ ಸಮ್ಮೇಳನಕ್ಕೆ ತೆರಳಿದ ಮುಖ್ಯ ಮಂತ್ರಿ ಹಾಗೂ ಇತರೆ ಪ್ರತಿನಿಧಿಗಳಿಗೆ ಹಾಗೂ ಕಾರ್ಯಕ್ರಮಕ್ಕೆ ರಾಜ್ಯದ ಬೊಕ್ಕಸದಿಂದಾದ ವೆಚ್ಚವೆಷ್ಟು ?

೧) ಮುಖ್ಯಮಂತ್ರಿ ಹಾಗೂ ಇತರ ಸಚಿವರುಗಳ ಒಟ್ಟು ವೆಚ್ಚ

೨) ಕಲಾವಿದರು ಹಾಗೂ ವಿಶೇಷ ಆಹ್ವಾನಿತರು

೩) ಅಧಿಕಾರಿಗಳ ಪ್ರಯಾಣ ವೆಚ್ಚ

೪) ವಸ್ತುಪ್ರದರ್ಶನ ''ನಾಡು-ನುಡಿ-ಸಂಸ್ಕೃತಿ'' ಅದರ ತಯಾರಿಕೆಗೆ

೫) ಮ್ಯಾಂಚೆಸ್ಟರ್ ಮತ್ತು ಲಂಡನ್ ನಗರದಲ್ಲಿ ಪ್ರದರ್ಶನ ವ್ಯವಸ್ಥೆಗೆ ಸ್ಥಳೀಯ ವೆಚ್ಚ, ಸಾರಿಗೆ ಇತ್ಯಾದಿ.